# ಸಂವಹನ, ಮಾಧ್ಯಮ ಮತ್ತು ಸಂಸ್ಕೃತಿಯ ಹೊಸ ಆಯಾಮಗಳು

**ಅರುಣ ಎಸ್.**

ಸಹಾಯಕ ಪ್ರಾಧ್ಯಾಪಕರು, ಎಂ.ಇ.ಎಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.

**DOI: https://doi.org/10.5281/zenodo.18776200**

## ABSTRACT:

ಮಾನವನ ಬದುಕಿನ ಅವಿಭಾಜ್ಯ ಅಂಗವಾದ ಸಂವಹನ, ಮಾಧ್ಯಮ ಮತ್ತು ಸಂಸ್ಕೃತಿಯ ನಡುವಿನ ಪರಸ್ಪರ ಸಂಬಂಧವನ್ನು ಈ ಲೇಖನವು ವಿವರಿಸುತ್ತದೆ. ಭಾಷೆಯು ಅತ್ಯಂತ ಪ್ರಬಲ ಸಂವಹನ ಮಾಧ್ಯಮವಾಗಿದ್ದು, ಸನ್ನೆಗಳಿಂದ ಆರಂಭವಾಗಿ ಆಧುನಿಕ ತಂತ್ರಜ್ಞಾನದವರೆಗೆ ಅದು ಬೆಳೆದು ಬಂದ ಬಗೆಯನ್ನು ಹಾಗೂ ಕ್ಲಾಡ್ ಶಾನನ್ ಮತ್ತು ವಾರೆನ್ ವೀವರ್ ಅವರ ಸಂವಹನ ಮಾದರಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಶೋಕನ ಶಾಸನಗಳಿಂದ ಹಿಡಿದು ಆಧುನಿಕ ಸಾಹಿತ್ಯ (ಪಂಪ, ಕುವೆಂಪು) ಮತ್ತು ಸಮೂಹ ಮಾಧ್ಯಮಗಳವರೆಗೆ ಸಂಸ್ಕೃತಿಯು ಹೇಗೆ ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಹರಿಯುತ್ತದೆ ಎಂಬುದನ್ನು ಲೇಖಕರು ವಿಶ್ಲೇಷಿಸಿದ್ದಾರೆ. ವ್ಯಕ್ತಿ ಮತ್ತು ಸಮಾಜದ ಪ್ರಗತಿಗೆ, ಸಾಂಸ್ಕೃತಿಕ ಮೌಲ್ಯಗಳ ವಿನಿಮಯಕ್ಕೆ ಮತ್ತು ಜ್ಞಾನದ ಹರಿವಿಗೆ ಪರಿಣಾಮಕಾರಿ ಸಂವಹನ ಅತ್ಯಗತ್ಯ ಎಂಬುದನ್ನು ಲೇಖನವು ಪ್ರತಿಪಾದಿಸುತ್ತದೆ.

## KEYWORDS:

ಸಂವಹನ, ಮಾಧ್ಯಮ, ಸಂಸ್ಕೃತಿ, ಭಾಷೆ, ಸಾಮಾಜಿಕ ಮೌಲ್ಯಗಳು.

ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ
ನೀಡುವೆನು ರಸಿಕ ನಿನಗೆ!
ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ!

–ದ.ರಾ.ಬೇಂದ್ರೆ

**ಸಂವಹನ**

ಎಲ್ಲಾ ಜೀವಿಗಳ ಬದುಕಿನ ಅವಿಭಾಜ್ಯ ಅಂಗ. ಹುಟ್ಟಿದ ಕ್ಷಣದಿಂದ ಸಾವಿನವರೆಗೂ ನಿರಂತರವಾಗಿ ನಡೆಯುವ ಕ್ರಿಯೆ. ಸಂವಹನ ಒಬ್ಬರನ್ನು ಇನ್ನೊಬ್ಬರಿಗೆ ಅರ್ಥಮಾಡಿಸುವ ಪ್ರಕ್ರಿಯೆ. ಏನನ್ನೋ ಕಲಿಯುವ, ಕಲಿಸುವ, ಒಲಿಯುವ, ಒಲಿಸುವ ಕ್ರಿಯೆ. ಎದುರಿಗಿರುವವರು ಮೆಚ್ಚುವಂತೆ ಮಾತನಾಡುವುದೇ ಸಂವಹನ ಪ್ರಕ್ರಿಯೆ ಎಂದು ತಿಳಿಯಬೇಕಾಗಿಲ್ಲ; ಇಡಿಯಾಗಿ ನಮ್ಮನ್ನು ಜಗತ್ತಿನೆದುರು ಪ್ರಕಟಗೊಳಿಸುವ ಪರಿಯೇ ಸಂವಹನ.

ಸಂವಹನ ಎಂದರೆ ತಲುಪಿಸುವುದು ಎಂದರ್ಥ. ಮೌನದ ಮೂಲಕ, ಮಾತಿನ ಮೂಲಕ, ಆಂಗಿಕ ಅಭಿನಯದ ಮೂಲಕ ಅಥವಾ ಇನ್ನಾವುದೇ ಬಗೆಯಲ್ಲಿ ಮನುಷ್ಯರು ಪರಸ್ಪರ ಮಾಹಿತಿಯನ್ನು ತಲುಪಿಸುವ ಪ್ರಕ್ರಿಯೆಯೇ ಸಂವಹನ. ಭಾಷೆ ಮಾನವನ ಅತ್ಯಂತ ಪ್ರಬಲ ಹಾಗೂ ಪರಿಣಾಮಕಾರಿ ಸಂವಹನ ಮಾಧ್ಯಮ. ಭಾಷೆ ಹುಟ್ಟುವುದಕ್ಕೆ ಮೊದಲು ವ್ಯಕ್ತಿ ವ್ಯಕ್ತಿಗಳ ನಡುವಿನ ಸಂವಹನವು ಕೇವಲ ಸನ್ನೆ ಸಂಕೇತಗಳ ಮೂಲಕವೇ ನಡೆಯುತ್ತಿತ್ತು.

ಭಾಷೆ ಅದು ಯಾವ ರೂಪದ್ದಾದರೂ ಆಗಿರಲಿ, ಅಂದರೆ ಅದು ಆಡುಭಾಷೆಯಾಗಿರಲಿ ಅಥವಾ ಲಿಖಿತ ಭಾಷೆಯಾಗಿರಲಿ, ಭಾವ ಮತ್ತು ವ್ಯವಹಾರಗಳ ಸಂವಹನ ಅದರ ಸೃಷ್ಟಿಗುಣ. ಅದು ಸಂವಹನ ಮಾಧ್ಯಮದ ಕಾಲದಿಂದ ಇಲ್ಲಿಯ ತನಕವೂ ಸಂವಹನ ಮಾಧ್ಯಮವಾಗಿಯೇ ವಿಕಾಸ ಹೊಂದುತ್ತಲೇ ಬಂದಿರುತ್ತದೆ.

ಭಾಷೆ ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದ್ದು, ಇದರ ಮೂಲಕ ಮಾಡುವ ಸಂವಹನವು ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ಇದು ಮಾತಿನ ಹಾಗೂ ಬರಹದ ರೂಪದಲ್ಲಿರಬಹುದು. ಯಾವುದೇ ವಿಚಾರ, ಭಾವನೆ, ಆಲೋಚನೆಗಳನ್ನು ಅಭಿವ್ಯಕ್ತಿಸಲು ಭಾಷೆ ಸಮರ್ಥ ಮಾಧ್ಯಮವೆಂದು ಎಲ್ಲರೂ ಒಪ್ಪುತ್ತಾರೆ. ಹೇಳುವ, ಕೇಳುವ ಭಾವನೆ-ಅಭಿಪ್ರಾಯಗಳನ್ನು ಹಂಚಿಕೊಳ್ಳುವ, ಪ್ರತಿಕ್ರಿಯೆ ನೀಡುವ ಪ್ರಕ್ರಿಯೆಯೇ ಸಂವಹನ ಎನ್ನಬಹುದು. ಸಂವಹನ ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಹೊಸ ಹೊಸ ಕ್ರಾಂತಿ ನಡೆದು ಮಾಹಿತಿ ಸಂವಹನಕ್ಕೆ ಸಂಬಂಧಿಸಿದಂತೆ ಕಾಲ-ದೇಶಗಳ ವ್ಯಾಪ್ತಿ ಅಂತರಗಳು ಈಗ ಊಹೆಗೂ ನಿಲುಕದಷ್ಟು ಕಡಿಮೆಯಾಗಿದೆ.

ಇಪ್ಪತ್ತೊಂದನೇ ಶತಮಾನವು ವಿಜ್ಞಾನ ತಂತ್ರಜ್ಞಾನಗಳ ಯುಗವಾಗಿರುವಂತೆಯೇ ಮಾಹಿತಿ ತಂತ್ರಜ್ಞಾನಗಳ ಯುಗವೂ ಆಗಿದೆ. ಆಧುನಿಕ ಸಂವಹನ ಪರಿಕರಗಳಿಂದಾಗಿ ಪ್ರಪಂಚ ಚಿಕ್ಕದಾಗುತ್ತಿದೆ. ಭಾಷೆಯನ್ನು ಭಾವನೆಗಳ

ವಿನಿಮಯಕ್ಕೆ ಬಳಸುವಷ್ಟೇ ಸುಲಭವಾಗಿ, ಸರಳವಾಗಿ ಹಾಗೂ ವೈವಿಧ್ಯಮಯವಾಗಿ ವ್ಯವಹಾರ ಪ್ರಪಂಚದಲ್ಲೂ ಇಂದು ಬಳಸಿಕೊಳ್ಳಲಾಗುತ್ತಿದೆ.

ಸಾಂಪ್ರದಾಯಿಕ ಭಾಷಾ ಕೌಶಲಗಳು ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಾಡಾಗುತ್ತಿರುವ ಇಂದು ಕನ್ನಡಕ್ಕೆ ಹೊಸ ವ್ಯಾಕರಣ, ಹೊಸ ಶಬ್ದಸಂಪತ್ತು, ಹೊಸ ಮಾರ್ಗದರ್ಶಿ, ಹೊಸ ದಿಕ್ಕು ಎಲ್ಲವೂ ಹೊಸದಾಗಿ ಸೇರಿಕೊಳ್ಳುತ್ತಿದೆ. ಸಂವಹನವು ಏಕಕಾಲದಲ್ಲಿ ಕಲೆ ಮತ್ತು ವಿಜ್ಞಾನ ಎರಡೂ ಆಗಿರುವುದರಿಂದ ಅದರ ವ್ಯವಸ್ಥಿತ ಅಧ್ಯಯನ ಆಧುನಿಕ ಜಗತ್ತಿನಲ್ಲಿ ಬಹಳ ಅಗತ್ಯವಾಗಿದೆ. ಕನ್ನಡ ಭಾಷೆ ವ್ಯವಹಾರ ಹಾಗೂ ಸಾಹಿತ್ಯಗಳಲ್ಲಿ ಸಂವಹನ ಕಲೆ ಬೆಳೆದು ಬಂದ ರೀತಿಯನ್ನು ಅಧ್ಯಯನ ಮಾಡುವ ಪ್ರಯತ್ನ ಇದಾಗಿದೆ. ಮಾನವ ಸಮಾಜಜೀವಿ. ಸಮಾಜದಿಂದ ಹೊರತಾದ ಮಾನವನ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಮನುಷ್ಯ ಇತರರೊಂದಿಗಿನ ಸಂಪರ್ಕಕ್ಕಾಗಿ ಅಂಗಾಭಿನಯವನ್ನು ಪ್ರಾರಂಭಿಸಿರಬೇಕು. ಅಂದು ಆರಂಭವಾದ ಸಂವಹನ ಪ್ರಕ್ರಿಯೆ ಇಂದಿನ ಆಧುನಿಕ ತಂತ್ರಜ್ಞಾನದವರೆಗೂ ಮುಂದುವರೆದಿದೆ.

ಸಂವಹನ ಶಬ್ದಕ್ಕೆ ಇಂಗ್ಲಿಷಿನಲ್ಲಿ ‘Communication’ ಎಂದು ಬಳಸಲಾಗಿದೆ. ವಹನ ಎಂದರೆ ಹರಿಯುವುದು ಎಂದರ್ಥ. ಸರಿಯಾದ ಮಾಹಿತಿಯು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹರಿಯುವುದು ಎಂದರ್ಥ. ಸಂವಹನವು ಸಮುದಾಯ, ಸಹಭಾಗಿತ್ವ, ಸಮಷ್ಟಿ, ಜನಾಂಗ, ಭಾವನೆ ಹಾಗೂ ಸಾಮುದಾಯಿಕ ಸಿದ್ಧಾಂತ ಎಂಬ ಮೊದಲಾದ ಪದ ಪ್ರಯೋಗಗಳೊಂದಿಗೆ ಅರ್ಥ ಸಂಬಂಧ ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಜನಸಮುದಾಯವನ್ನು ಪರಸ್ಪರ ಹತ್ತಿರಕ್ಕೆ ತರುವ, ಸಂಬಂಧ ಬೆಸೆಯುವ ಸಾಧನವೇ ಸಂವಹನ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಸಂವಹನ ಎನ್ನುವುದು ಚಲನಶೀಲತೆಯನ್ನು ಹೊಂದಿರುವಂಥದ್ದೆಂದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಸಂವಹನ ಎನ್ನುವುದು ವಿವಿಧ ಮಾಧ್ಯಮ ಸಂಕೇತಗಳ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ವಿಷಯಗಳು ತಿಳಿಯಪಡಿಸುವ ಕ್ರಿಯೆ ಎನ್ನಬಹುದು. ಜನಾಭಿಪ್ರಾಯ, ಸಮಾಚಾರ, ತಿಳುವಳಿಕೆ, ಭಾವನೆಗಳನ್ನು ಭಾಷೆ, ಸಂಕೇತ, ಪ್ರತೀಕಗಳ ಮೂಲಕ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆ. ಹರಿಯುವಿಕೆ ಎಂಬ ಗ್ರಹಿಕೆಯಲ್ಲಿ ಹರಿಯುವುದೇ ನದಿಯ ಧರ್ಮ. ಸಂವಹನವೂ ಹರಿಯುತ್ತದೆ. ಗೊತ್ತಿರುವ ಕಡೆಯಿಂದ ಗೊತ್ತಿಲ್ಲದ ಕಡೆಗೆ; ಆದರೆ ಹರಿಯುವುದು ನೀರಲ್ಲ, ಮನುಷ್ಯನಿಗೆ ನೀರಿನಷ್ಟೇ ಅಮೂಲ್ಯವಾದ ಮಾಹಿತಿ ಮತ್ತು ವಿಚಾರಗಳ ವಿನಿಮಯ ಧಾರೆ. ವ್ಯಕ್ತಿಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಗತ್ಯತೆಯನ್ನು ಪೂರೈಸುವುದು ಸಂವಹನದ ಪರಮ ಉದ್ದೇಶ.

ಸಂವಹನ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಮಾಹಿತಿಯು ಸಾಗಿದಾಗ ಸಂವಹನವಾಗುತ್ತದೆ. ಸಂವಹನವು ಯಶಸ್ವಿಯಾದಾಗ ಸಂವಹನಕಾರ ಹಾಗೂ

ಸಂವಹನ ಸ್ವೀಕರಿಸಿದಾತ ಒಂದೇ ಮಾಹಿತಿ ಹಂಚಿಕೊಂಡಿರುತ್ತಾರೆ. ಇದು ವ್ಯಕ್ತಿ-ವ್ಯಕ್ತಿಗಳ ನಡುವೆ ಸಂಬಂಧವನ್ನು ಬೆಳೆಸುವುದರಿಂದ ಸಮುದಾಯಕ್ಕೆ ಅಡಿಪಾಯ.

ಡೇನಿಸ್ ಮೆಕ್ವೇಲ್ – "ಸಂವಹನವು ಸಾಮಾನ್ಯತೆಯನ್ನು ವರ್ಧಿಸುವ ಕ್ರಿಯೆ."

ಆರ್.ಎಲ್.ಹೋಮ್ – "ಸಂವಹನವೆಂದರೆ ಇಬ್ಬರು ಅಥವಾ ಹೆಚ್ಚು ಜನರ ನಡುವೆ ಅರ್ಥದ ಬೆಸುಗೆ."

ಸಂವಹನದ ಮುಖ್ಯ ರೇಖಾ ಚಿತ್ರವು ಈ ಕೆಳಗಿನ ಅಂಶಗಳನ್ನು ಹೊಂದಿರಲೇಬೇಕು:

**ಪ್ರೇಕ್ಷಕ – ಸಂದೇಶ – ಮಾಧ್ಯಮ – ಗ್ರಾಹಕ**

ಸಂದೇಶವನ್ನು ಯಾರು ನೀಡುತ್ತಾರೋ ಅವನೇ ಪ್ರೇಕ್ಷಕ/ಸಂವಾಹಕನಾಗುತ್ತಾನೆ. ಸಂವಹನದ ಅವಶ್ಯಕತೆಗಳಿಗನುಗುಣವಾಗಿ ಸಂದೇಶವನ್ನು ರೂಪಿಸುವುದು. ಸಂವಾಹಕನಿಂದ ಹೊರಟ ಸಂದೇಶವನ್ನು ಗ್ರಾಹಕನಿಗೆ ತಲುಪಿಸುವ ಕಾರ್ಯ ಮಾಧ್ಯಮ. ಸಂವಾಹಕನಿಂದ ಸಂದೇಶ ಪಡೆಯುವ ವ್ಯಕ್ತಿ ಗ್ರಾಹಕ. (ಶೇನಾನ್ ಮತ್ತು ವೀವರ್ ಅವರ ಮಾದರಿ ಸಂವಹನ ಪ್ರಸಂಗ).

ಸಂವಹನಕ್ಕೆ ಭಾಷೆ ಅಗತ್ಯ. ಜಗತ್ತಿನ ಎಲ್ಲಾ ಮಾನವ ಭಾಷೆಗಳಿಗೂ ತನ್ನದೇ ಆದ ಶಿಸ್ತುಬದ್ಧವಾದ ಒಂದು ವ್ಯವಸ್ಥೆ ಇರುತ್ತದೆ. ಸಂವಹನ ಮನುಷ್ಯನ ನಿತ್ಯಜೀವನದ ಅವಿಭಾಜ್ಯ ಹಾಗೂ ಅನಿವಾರ್ಯ ಅಂಗ. ಭಾಷೆ ಎನ್ನುವುದು ಒಂದು ನಿರ್ದಿಷ್ಟ ವಿನ್ಯಾಸವಿರುವ ರಚನೆ. ನೋಮ್ ಚೋಮ್ಸ್ಕಿ ಹೇಳುವಂತೆ, "The most stupid man learns how to talk, while even the most brilliant monkeys never learn." ಹಾಗಾಗಿ ಭಾಷೆ ಮತ್ತು ಸಂವಹನ ನೇರವಾಗಿ ಪರಸ್ಪರ ಸಂಬಂಧ ಹೊಂದಿದೆ.

ಸಮಾಜ ಜೀವಿಯಾದ ಮನುಷ್ಯ ತನ್ನ ಸುತ್ತಮುತ್ತಣ ಜನರೊಂದಿಗೆ ಒಂದಲ್ಲ ಒಂದು ರೀತಿ ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ. ಮನುಷ್ಯನ ವ್ಯವಹಾರದ ಬಹುಮುಖ್ಯ ಮಾಧ್ಯಮ ಮತ್ತು ಬಂಡವಾಳ ಭಾಷೆ. ಸಂವಹನವನ್ನು ಭಾವನೆ, ಸಮಾಚಾರ, ವಿಚಾರ, ಜ್ಞಾನಗಳನ್ನು ಸಂಕೇತಗಳ ಮೂಲಕ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆ. ಒಟ್ಟಿನಲ್ಲಿ ಮನುಷ್ಯನ ಬೇಕು ಬೇಡಗಳನ್ನು ತಿಳಿಸಲು, ವಿಚಾರ ವಿನಿಮಯ ಮಾಡಿಕೊಳ್ಳಲು, ಅನುಭವ ಹಂಚಿಕೊಳ್ಳಲು, ಸಮಾಜದಲ್ಲಿ ಜಗತ್ತಿನಲ್ಲಿ ನಡೆಯುತ್ತಿರುವ ಹೊಸ ಹೊಸ ಸಂಗತಿಗಳನ್ನು ಅರಿಯಲು, ಇನ್ನೊಬ್ಬರ ಮೇಲೆ ಪ್ರಭಾವ ಬೀರಲು ಎಲ್ಲದಕ್ಕೂ ಭಾಷಾ ಸಂವಹನ ಬೇಕೇ ಬೇಕು.

"Man is known not only by the company he keeps but also by the words he speaks" ಎಂಬ ಮಾತು ಮನುಷ್ಯನಿಗೆ ತನ್ನತನವನ್ನು ತೋರಿಸಿಕೊಟ್ಟಿದ್ದೇ ಆತನ ಮಾತಿನ ಶಕ್ತಿ.

ಎಡ್ವರ್ಡ್ ಬಿ.ಟೈಲರ್ ರವರ ಪ್ರಕಾರ ಮಾನವನು ಸಮಾಜದ ಒಬ್ಬ ಸದಸ್ಯನಾಗಿ ತಾನು ಗಳಿಸಿಕೊಳ್ಳುವ ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು ಸಂಪ್ರದಾಯ ಮತ್ತು ಇತರ ಸಂಕೀರ್ಣವಾದ ವ್ಯವಸ್ಥೆಯನ್ನು ಸಂಸ್ಕೃತಿ ಎನ್ನುತ್ತೇವೆ. ಕಲಿಕೆ ಮತ್ತು ಹಂಚಿಕೊಳ್ಳುವಿಕೆಗೆ ಸಂವಹನ ಬೇಕು. ವ್ಯಕ್ತಿಯ ಪ್ರತಿಯೊಂದು ಸಾಮಾಜಿಕ ಕ್ರಿಯೆಯೂ ಸಂವಹನವನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬರೂ ಅವರವರ ಸಾಂಸ್ಕೃತಿಕ ಮೌಲ್ಯ ವ್ಯವಸ್ಥೆಯ ನೆಲೆಗಟ್ಟಿನೊಳಗೇ ಸಂವಹನ ನಡೆಸುತ್ತಾರೆ.

ಸಂಸ್ಕೃತಿ ಎನ್ನುವುದು ವ್ಯಕ್ತಿಯೊಬ್ಬ ತಾನು ಬೆಳೆಯುತ್ತಿರುವ ಪರಿಸರದಿಂದ ಕಲಿಯುವ ಮತ್ತು ಸದಾಕಾಲ ಪರಿವರ್ತನೆ ಆಗುವ ಒಂದು ವ್ಯವಸ್ಥೆ. ಮಾನವನ ವರ್ತನೆ ಮತ್ತು ತಿಳುವಳಿಕೆಗಳ ಮೇಲೆ ಸಂಸ್ಕೃತಿಯು ಮಹತ್ತರವಾದ ಪ್ರಭಾವವನ್ನು ಬೀರುತ್ತದೆ. ತಾವು ವ್ಯವಹರಿಸುವ ಜನಗಳ ಸಂಸ್ಕೃತಿಯನ್ನು ಅರಿತುಕೊಳ್ಳದೇ ಸಂವಹನ ತಂತ್ರಗಳನ್ನು ಪರಿಣಾಮಕಾರಿಯಾಗಿಸಲು ಯೋಜಿಸಲು ಸಾಧ್ಯವಿಲ್ಲ.

ಪ್ರತಿಯೊಬ್ಬರೂ ಅವರವರ ಸಾಂಸ್ಕೃತಿಕ ಮೌಲ್ಯ ಮತ್ತು ವ್ಯವಸ್ಥೆಯ ನೆಲೆಗಟ್ಟಿನೊಳಗೇ ಸಂವಹನ ನಡೆಸುತ್ತಾರೆ. ವ್ಯಕ್ತಿ ಏನನ್ನು ಪರೀಕ್ಷಿಸಬೇಕು ಮತ್ತು ಏನನ್ನು ಆಶಿಸಬಾರದು ಎಂಬುದನ್ನು ಮೌಲ್ಯಗಳು ತಿಳಿಸುತ್ತವೆ. ಯಾವುದೇ ಸಂಸ್ಕೃತಿಗೆ ಸೇರಿದ ಬೇರೆ ಬೇರೆ ಮೌಲ್ಯಗಳನ್ನು, ಆಶಯಗಳನ್ನು ಜನರು ಪರಸ್ಪರ ಅರ್ಥ ಮಾಡಿಕೊಂಡರೆ ಅವರು ಸುಲಭವಾಗಿ ಸಂವಹಿಸಬಹುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಲೌಕಿಕ ಪ್ರಧಾನವಾದ ಸಂಸ್ಕೃತಿ ಸಂವಹನಗೊಂಡಿದೆ. ಸಾಹಿತ್ಯ ಮತ್ತು ಸಂಸ್ಕೃತಿಗಳ ನಡುವೆ ಭಾವನಾತ್ಮಕವಾದ ಹಾಗೂ ಐತಿಹಾಸಿಕವಾದ ರಚನೆ ಆಯಾ ಕಾಲದ ಸಂಸ್ಕೃತಿಯ ನೆಲೆಯಿಂದ ಮೂಡಿ ಬಂದಿರುತ್ತದೆ. ಸಂಸ್ಕೃತಿ ಎಂಬುದು ನಿರಂತರವಾಗಿ ಚಲನಶೀಲವಾದುದು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಂವಹನ ಕಲೆ ಬಳಕೆಯಾದ ರೀತಿ ಅನನ್ಯವಾದುದು. ಆದಿಕವಿ ಪಂಪನಿಂದ ಆಧುನಿಕ ಕಾವ್ಯದವರೆಗೂ ಸಂವಹನದ ಪರಿಣಾಮಕಾರಿ ಬಳಕೆಯನ್ನು ಕಾಣಬಹುದು. ಕುವೆಂಪು ಅವರ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಮಲೆನಾಡಿನ ಜೀವನ ಕ್ರಮ, ಅವರ ಸಂಸ್ಕೃತಿ ಸಾಂಸಾರಿಕ ಚಿತ್ರಣ, ಶಿವರಾಮ ಕಾರಂತರ ಮರಳಿ ಮಣ್ಣಿಗೆ, ಬೆಟ್ಟದ ಜೀವದಂತಹ ಕಾದಂಬರಿಗಳು; ಪ್ರತಿಯೊಂದು ಕಾದಂಬರಿಯೂ ಒಂದೊಂದು ಸಾಮಾಜಿಕ ಜೀವನದ, ಅಲ್ಲಿನ ಸಂಘರ್ಷಗಳ ಸಮಗ್ರ ಚಿತ್ರಣ ನೀಡುವ ಕೈಪಿಡಿಯಂತಿದೆ. ಇಲ್ಲೆಲ್ಲಾ ಸಂಸ್ಕೃತಿ ಸಂವಹನ ಕ್ರಿಯೆ ಅನಾಯಾಸವಾಗಿ ನಡೆಯುತ್ತಿರುತ್ತದೆ.

ಮಾಧ್ಯಮ ಎನ್ನುವುದು ಕೇವಲ ಒಂದು ಭೌತಿಕ ಸಾಧನವಾಗಿರದೆ ಅದೊಂದು ವ್ಯವಸ್ಥೆಯಾಗಿದೆ. ಸಂವಹನದಿಂದ ಮನುಷ್ಯ ಜೀವನ ಸಮೃದ್ಧವಾಗಿದ್ದು ಭಾರತದಲ್ಲಿ ವೈದಿಕ ಸಂಸ್ಕೃತಿಯು ಪ್ರಬಲವಾಗಿದ್ದ ಕಾಲದಲ್ಲಿ ಸಂವಹನದ ರೀತಿ ನೀತಿಗಳು ಬಳಕೆಯಲ್ಲಿದ್ದವು. ನಾಲ್ಕು ವೇದಗಳು, ಹತ್ತು ಉಪನಿಷತ್ತುಗಳು, ಸಂಗೀತ, ನೃತ್ಯ, ನಾಟಕಗಳಂತಹ ಕಲೆಗಳು ಇವೆಲ್ಲವೂ ಭಾರತೀಯ ಸಂಸ್ಕೃತಿಯಲ್ಲಿ ನಡೆದುಕೊಂಡು

ಬಂದಿವೆ.

ಸಂವಹನ ಮಾಧ್ಯಮಗಳ ಬೇರು ನಮ್ಮ ಸಂಸ್ಕೃತಿಯ ಹೆಮ್ಮೆಗಳಾದ ಪುರಾಣ ಇತಿಹಾಸ ಕಾಲದಲ್ಲಿಯೇ ಇದ್ದವು. ಭಾರತದ ಅನೇಕ ಪ್ರಾದೇಶಿಕ ಭಾಷೆಗಳಲ್ಲಿನ ಕಾದಂಬರಿಗಳಾದ ಆರ್.ಕೆ.ನಾರಾಯಣ್ ಅವರ 'ಮಾಲ್ಗುಡಿ ಡೇಸ್', ಎಸ್. ಎಲ್. ಬೈರಪ್ಪನವರ 'ಗೃಹಭಂಗ', ಮಾಸ್ತಿ ಅವರ 'ಸುಬ್ಬಣ್ಣ' ಹೀಗೆ ಇವೆಲ್ಲವೂ ದೂರದರ್ಶನ ಎಂಬ ಮಾಧ್ಯಮದ ಮೂಲಕ ಜನಸಾಮಾನ್ಯರಿಗೆ ತಲುಪಿ ಜನಪ್ರಿಯವಾದವು.

ಅಶೋಕ ಚಕ್ರವರ್ತಿಯ ಕಾಲದಲ್ಲಿ ಲಿಖಿತ ರೂಪದ ಸಂವಹನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದ್ದು, ಬೌದ್ಧ ಧರ್ಮಾನುಯಾಯಿಯಾದ ಅಶೋಕ ತಾನು ನಂಬಿದ ಧರ್ಮದ ಪ್ರಚಾರಕ್ಕಾಗಿ ಶಿಲಾಶಾಸನ, ಸ್ತಂಭಶಾಸನ ಹಾಗೂ ಗವಿಶಾಸನಗಳನ್ನು ನಿರ್ಮಿಸಿರುವುದಾಗಿ ಇತಿಹಾಸ ತಿಳಿಸುತ್ತದೆ. ಗೌತಮಬುದ್ಧ, ಮಹಾವೀರ, ಶಂಕರಾಚಾರ್ಯ, ಗುರುನಾನಕ್, ರಾಮ್‌ದಾಸ್, ಗಾಂಧಿ, ವಿನೋಬಾಭಾವೆ ಮೊದಲಾದವರು ದೇಶಾದ್ಯಂತ ಸಂಚರಿಸಿ ತಮ್ಮ ತಮ್ಮ ಉಪದೇಶ, ತತ್ವ ಪ್ರಸಾರವನ್ನು ಜನರಿಗೆ ತಲುಪಿಸುತ್ತಿದ್ದರು. ಹಲ್ಮಿಡಿ ಶಾಸನದಿಂದ ಹಿಡಿದು ಅನೇಕ ಶಾಸನಗಳು, ತಾಳೆಯೋಲೆಗಳು ಕನ್ನಡ ನಾಡಿನ ಪುರಾತನ ಲಿಖಿತ ಸಂವಹನ ಮಾಧ್ಯಮಗಳಾಗಿವೆ. ಬಸವಣ್ಣ, ಅಕ್ಕಮಹಾದೇವಿ ಇತ್ಯಾದಿ ಶಿವಶರಣ-ಶಿವಶರಣೆಯರು, ಕನಕ-ಪುರಂದರದಾಸರಂತಹ ಕೀರ್ತನಕಾರರು, ಚಿಂತಕರು, ಭಾಗವತರು ಸಮಾಜಕ್ಕೆ ಸಂದೇಶವನ್ನು ನೀಡುತ್ತಿದ್ದರು.

ಭಾಷೆಗಳಲ್ಲಿ ಹೊಸ ಹೊಸ ಆವಿಷ್ಕಾರಗಳು, ಭಾಷಾಂತರ, ಹೊಸ ಪದಗಳು ಜನ್ಮತಾಳುತ್ತವೆ. ಕನ್ನಡ ಭಾಷೆ ಹಳಗನ್ನಡದಿಂದ ನಡುಗನ್ನಡವಾಗಿ ನಂತರ ಹೊಸಗನ್ನಡವಾಯಿತು. ಅನೇಕ ಪದಗಳು ಅಳಿದು ಹೋಗಿ ಸಾವಿರಾರು ಹೊಸ ಪದಗಳು ಹುಟ್ಟಿಕೊಂಡವು. 20ನೇ ಶತಮಾನದಲ್ಲಿ, ಅಂದರೆ 1949ರಲ್ಲಿ ಅಮೆರಿಕಾದ ಬೆಲ್ ಪ್ರಯೋಗಾಲಯದಲ್ಲಿ ಕ್ಲಾಡ್ ಶಾನನ್ ಮತ್ತು ವಾರೆನ್ ವೀವರ್ ಎನ್ನುವ ಭಾಷಾ ವಿಜ್ಞಾನಿಗಳು ಮೊಟ್ಟಮೊದಲಿಗೆ ಸಂವಹನ ಮಾದರಿಯನ್ನು ಕಂಡುಹಿಡಿದಿದ್ದಾರೆ. ನಮ್ಮ ಪ್ರಾಚೀನ ವೈಯಾಕರಣಿ ಕೇಶೀರಾಜ ಹೇಳಿರುವಂತೆ 'ಶಬ್ದಪಾರಮಾರ್ಗಂ ಅಶಕ್ಯಂ' (ಭಾವಕ್ಕೆ ತಕ್ಕಂತೆ ಭಾಷೆ). ಭಾಷೆಯಿಂದ ಸಂವಹನಗೊಳಿಸುವಷ್ಟು ತೀವ್ರತರವಾದ ಸಂವೇದನೆ ಇತರ ಯಾವುದೇ ಸಂವಹನ ಮಾಧ್ಯಮಕ್ಕೆ ಇರುವುದಿಲ್ಲ.

ನಮ್ಮ ಸಮಾಜ ಸುಸಂಸ್ಕೃತವಾಗಲು, ನಮ್ಮ ಜೀವನ ಉತ್ತಮ ವಿಚಾರಗಳಿಂದ ಪ್ರಗತಿ ಹೊಂದಲು ಸಂವಹನ ಕ್ರಿಯೆ ನೆರವಾಗುತ್ತದೆ. ಸಾಹಿತ್ಯವೆಂಬ ಚಾಕ್ಷುಷ ರೂಪ, ಶ್ರವಣ ಮತ್ತು ಅಧ್ಯಯನದ ಆತ್ಮಸಂಗಾತಕ್ಕೆ ಒಳಗಾದಾಗಲೇ ಸಂವಹನ ಕ್ರಿಯೆ ಪ್ರಾರಂಭವಾಗುತ್ತದೆ.

ಒಂದು ಜನಾಂಗದ ಜೀವನ ವಿಧಾನವನ್ನು ಸಂಸ್ಕೃತಿ ಎನ್ನಲಾಗುತ್ತದೆ. ಅದರಲ್ಲಿ ಅವರ ಆಚಾರ, ವಿಚಾರ, ನಂಬಿಕೆ, ಕಲ್ಪನೆ ಎಲ್ಲವೂ ಸೇರಿರುತ್ತದೆ. ಯಾವುದೇ

ಜನಾಂಗದ ಜೀವನದ ಎಲ್ಲಾ ಸಂಗತಿಗಳು ಸಾಂಸ್ಕೃತಿಕ ಸಂಗತಿಗಳು ಎಂದು ಅನ್ನಿಸಿದರೂ, ಹೆಚ್ಚಿನ ಸಂದರ್ಭದಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪಕಲೆ, ಚಿತ್ರಕಲೆಗಳನ್ನು ಸಾಂಸ್ಕೃತಿಕ ಸಂಗತಿಗಳೆಂದು ಗುರುತಿಸಲಾಗುತ್ತದೆ. ವಿಶೇಷವೆಂದರೆ ಇವು ಆಯಾಯ ಸಂಸ್ಕೃತಿಯ ಸಂವಹನ ಮಾಧ್ಯಮಗಳೂ ಆಗಿವೆ. ಇಡಿಯಾಗಿ ಸಂಸ್ಕೃತಿ ಎನ್ನುವುದು ಜೀವನ ವಿಧಾನವೂ ಹೌದು. ಕಾವ್ಯ ಸಂಸ್ಕೃತಿಯಲ್ಲಿ ಭಾಷೆಯನ್ನು ಅತ್ಯಂತ ಸೃಜನಶೀಲವಾಗಿ ಬಳಸಿಕೊಂಡು ಅದನ್ನು ಸಹೃದಯನಿಗೆ ಸಂವಹಿಸುತ್ತದೆ.

ಮನುಷ್ಯ ಪಶು ಪಕ್ಷಿಗಳಿಗಿಂತಲೂ ಮೇಲಿನ ಹಂತದಲ್ಲಿ ಸಮಾಜ ಜೀವಿಯಾಗಿರುವುದರಿಂದ ಆತನ ಸಂವಹನ ಪ್ರಕ್ರಿಯೆಯೇ ಬದಲಾಗುತ್ತಾ ಬೆಳೆಯುತ್ತಾ ಬಂದಿದೆ. ಅಂದಂದಿನ ಅಗತ್ಯಕ್ಕೆ ತಕ್ಕ ಹಾಗೇ ತನ್ನ ಭಾಷೆ ಹಾಗೂ ಸಂವಹನದ ರೀತಿಗಳನ್ನು ಆಧುನಿಕರಣಗೊಳಿಸಿಕೊಂಡಿರುವುದು ಮನುಷ್ಯರ ಬೌದ್ಧಿಕ ಚಾತುರ್ಯಕ್ಕೆ ಸಾಕ್ಷಿಯಾಗಿದೆ. ಮಾನವನ ಸಂವಹನ ಚಟುವಟಿಕೆಗಳಿಗೂ ಹಾಗೂ ಭಾಷೆಯ ಆಧುನೀಕರಣಕ್ಕೂ ನೇರ ಸಂಬಂಧವಿದೆ. ಮನುಷ್ಯನ ಬೇಕು ಬೇಡಗಳನ್ನು ತಿಳಿಸಲು, ವಿಚಾರ ವಿನಿಮಯ ಮಾಡಿಕೊಳ್ಳಲು, ಅನುಭವ ಹಂಚಿಕೊಳ್ಳಲು, ಸಮಾಜದಲ್ಲಿ ಜಗತ್ತಿನಲ್ಲಿ ನಡೆಯುತ್ತಿರುವ ಹೊಸ ಹೊಸ ಸಂಗತಿಗಳನ್ನು ಅರಿಯಲು, ಇನ್ನೊಬ್ಬರ ಮೇಲೆ ಪ್ರಭಾವ ಬೀರಲು ಎಲ್ಲದಕ್ಕೂ ಭಾಷಾ ಸಂವಹನ ಬೇಕೇ ಬೇಕು.

## ಪರಾಮರ್ಶನ ಗ್ರಂಥಗಳು:

1. ಈಶ್ವರ್ ಎಚ್. ಎಸ್., (2010), ಸಮೂಹ ಸಂವಹನ ಮಾಧ್ಯಮಗಳ ಪರಿಚಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಬಸವರಾಜ ಕಲ್ಗುಡಿ, (2011), ಸಂವಹನ ಕೌಶಲ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
3. ಚಂದ್ರಶೇಖರ ಬಿ.ಎಸ್., (2008), ಸಂವಹನ ಮಾಧ್ಯಮಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ಚಂದ್ರಶೇಖರ ಬಿ. ಎಸ್., (2012), ಆಧುನಿಕ ಸಮೂಹ ಮಾಧ್ಯಮಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಪರಮಶಿವಮೂರ್ತಿ ಡಿ.ವಿ., (2016), ಸಂವಹನ ಕನ್ನಡ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.